ಈ) ಕಳೆದ ಹಣಕಾಸಿನ ವರ್ಷದಿಂದ ಪಟ್ಟಿ ಚಿನ್ನದ ಗಣಿ ನಿಗಮವು ನಗದು ಲಾಭವನ್ನು ಗಳಿಸಲು ಸಾಧ್ಯವಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ನಿಗಮದ ಯೋಜನೆಯ ಪ್ರಕಾರ ಸುಮಾರು 790 ಲಕ್ಷ ರೂ.ಗಳ ನಗದು ಲಾಭವನ್ನು ಗುರಿಯಲ್ಲಿ ಇಟ್ಟುಕೊಂಡಿರುತ್ತದೆ. ಏಪ್ರಿಲ್ 2001ರಿಂದ ದಿನಾಂಕ: 17-7-2001 ರವರೆಗೆ ಈಗಾಗಲೇ 681.76 ಕೇಜ ಪರಿಶುದ್ಧ ಚಿನ್ನವನ್ನು ಉತ್ಪಾದಿಸಿದೆ. ಜೂನ್ 2001ರ ಮಾಹೆಯಲ್ಲಿ 225 ಕೇಜ ಪರಿಶುದ್ಧ ಚಿನ್ನವನ್ನು ಉತ್ಪಾದಿಸಿದೆ.

ಚಿನ್ನದ ನಿಕ್ಷೇಪವಲ್ಲದೆ ಬೇರೆ ಇತರೆ ಖನಿಜಗಳನ್ನು ನಿಗಮವು ತೆಗೆಯುತ್ತಿರುವುದಿಲ್ಲ.

ಚಿಂತಾಮಣಿ ಪಟ್ಟಣದ ವರ್ತೂಲ ರಸ್ತೆ ನಿರ್ಮಾಣ

2651 (3057) ಶ್ರೀ ಚೌಡರೆಡ್ಡಿ (ಚಿಂತಾಮಣಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಂತಾಮಣಿ ಪಟ್ಟಣದ ವರ್ತೂಲ ರಸ್ತೆ ಸರ್ಕಾರದ ಆದೇಶ ಸಂಖ್ಯೆ : ನುಯೋಪ್ರಾ : ಚಿ : ಸ್ಥೂ : ಆಯೋ : ಅಂತಿಮ : 2000-2001 ದಿನಾಂಕ : 7-9-2000ರ ಮೇರೆಗೆ ಮಂಜೂರಾಗಿ ಈ ಬಗ್ಗೆ ನಕ್ಷೆ ತಯಾರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವರ್ತುಲ ರಸ್ತೆ ಪ್ರದೇಶದಲ್ಲಿ ಸ್ಥಳವನ್ನು ಸ್ವಾಧೀನ ಮಾಡಿಕೊಳ್ಳಲು ವಿಳಂಭವಾದ್ದರಿಂದ ಈ ಪ್ರದೇಶಗಳಲ್ಲಿ ಅನಧಿಕೃತ ಕಟ್ಟಡಗಳು ಬಂದು ಈ ಕಾಮಗಾರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಕೈಗೊಳ್ಳುವ ಕ್ರಮವೇನು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಚಿಂತಾಮಣಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಸ್ಥೂಲಾಬಿವೃದ್ಧಿ ಯೋಜನೆಗೆ ಸರ್ಕಾರವು ಕಾಯ್ದೆ 1961ರ ಪ್ರಕರಣ 13(3) ರನ್ವಯ ಆದೇಶ ಸಂಖ್ಯೆ ನಆಇ 312 ಎಂಆಟಿ 2000 ಬೆಂಗಳೂರು ದಿನಾಂಕ: 22-7-2000ರಲ್ಲಿ ಅಂತಿಮ ಅನುಮೋದನೆ ನೀಡಿದೆ. ಸದರಿ ಯೋಜನೆಯಲ್ಲಿ ವರ್ತುಲ ರಸ್ತೆಯನ್ನು ರೂಪಿಸಲು ಸಹ ಪ್ರಸ್ತಾಪಿಸಲಾಗಿದೆ.

ಆ) ಇಲ್ಲ.

ಇ) ಅನಧಿಕೃತ ಬೆಳವಣಿಗೆಗಳನ್ನು ತೆರವುಗೊಳಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಲ್ಲಿ ಅವಕಾಶವಿದೆ. ಅದರಂತೆ ಕ್ರಮ ಕೈಗೊಳ್ಳಲಾಗುವುದು.

ಕಾರ್ಕಳ ಪುರಸಭೆಯಲ್ಲಿ ಒಳಚರಂಡಿ ವ್ಯವಸ್ಥೆ

2653 (3049) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಾರ್ಕಳ ಪುರಸಭೆಗೆ ಕೆಲವು ವರ್ಷಗಳ ಹಿಂದೆ ಮಂಡಳಿಯ ವತಿಯಿಂದ ಒಳಚರಂಡಿ ಕಾಮಗಾರಿ ಮಾಡಿದ್ದು ಅದು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸದೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಈ ದುರವ್ಯವಸ್ಥೆಯ ಒಳಚರಂಡಿ ಪೈಪುಗಳು ಮ್ಯಾನ್‌ಹೋಲ್‌ಗಳು ಸೋರುತ್ತಿದ್ದು, ಕೊಳಕು ನೀರೆಲ್ಲ ನದಿಗೆ ಸೇರಿ ನದಿಯೇ ಕಲುಷಿತವಾಗುತ್ತಿದ್ದು ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :—

1. ಬಂದಿದೆ.

2. ಕಾರ್ಕಳ ಒಳಚರಂಡಿ ಯೋಜನೆಯನ್ನು 1993ರಲ್ಲಿ ಚಾಲನೆಗೊಳಿಸಿದ್ದು, ಪುರಸಭೆಗೆ ನಿರ್ವಹಣೆಗೆ ಹಸ್ತಾಂತರಿಸಲಾಗಿದ್ದು, ಹಾಲಿ ಪುರಸಭೆಯವರೇ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಿಸುತ್ತಿರುತ್ತಾರೆ. 1995ನೇ ಇಸವಿಯಲ್ಲಿ ಅಂದಿನ ಮುಖ್ಯಮಂತ್ರಿಗಳು ಮಂಡಳಿಯ ಅಧಿಕಾರಿಗಳೊಂದಿಗೆ ಜಂಟಿ ಪರಿವೀಕ್ಷಣೆ ನಡೆಸಿ, ಮ್ಯಾನ್‌ಹೋಲ್‌ಗಳನ್ನು ದುರಸ್ಥಿಗೊಳಿಸುವ ಹಾಗೂ 350 ಮತ್ತು 500 ಮಿ.ಮಿ.ವ್ಯಾಸದ ಆರ್.ಸಿ.ಸಿ. ಗ್ರಾಮ ಸಾರ ಪೈಪುಗಳ ಜೋಡಣೆಯನ್ನು ಸ್ಥಳಾಂತರಿಸುವ ಕಾಮಗಾರಿಯನ್ನು ರೂ.30,000.00 ವೆಚ್ಚದಲ್ಲಿ ಕೈಗೊಂಡು ಏಪ್ರಿಲ್ 97ರಲ್ಲಿ ಪೂರ್ಣಗೊಳಿಸಿ ಗ್ರಾಮಸಾರವನ್ನು ಆಕ್ಸಿಡೇಷನ್ ಪಾಂಡ್‌ವರೆಗೆ ಸರಾಗವಾಗಿ ಹರಿಯುವಂತೆ ಮಾಡಲಾಯಿತು.

ಆಕ್ಸಿಡೇಷನ್ ಪಾಂಡನ್ನು ಸೇರುವ 500 ಮಿ.ಮಿ. ವ್ಯಾಸದ ಕೊಳವೆಯು ಗದ್ದೆಗಳ ಮುಖಾಂತರ ಹಾದು ಹೋಗಿದ್ದು, ಸ್ಥಳೀಯ ರೈತರು ಹಾಗೂ ಇತರರು ಈ ಪೈಪುಗಳನ್ನು ಒಡೆದು ಗದ್ದೆಗೆ ಗ್ರಾಮಸಾರವನ್ನು ಹಾಯಿಸಿರುವುದರಿಂದ, ಅಲ್ಲಲ್ಲಿ, ಸೋರುವಿಕೆ ಉಂಟಾಗಿರುತ್ತದೆ. ಇದನ್ನು ಸರಿಪಡಿಸುವ ಸಲುವಾಗಿ ರೂ.9.70 ಲಕ್ಷಗಳ ಅಂದಾಜನ್ನು ತಯಾರಿಸಿ ಮಂಡಳಿಯ ಮಂಗಳೂರು ವಿಭಾಗದಿಂದ ಕಾರ್ಕಳ ಪುರಸಭೆಗೆ